ರಸ್ತೆಗಳು, ವರ್ಗ–2 ರಲ್ಲಿ ಜೆಲ್ಲಿ/ಗ್ರಾವೆಲ್/ಬಾಗಶಃ ಡಾಂಬರೀಕರಿಸಿದ ರಸ್ತೆಗಳು ಹಾಗೂ ವರ್ಗ–3 ರಲ್ಲಿ ಡಾಂಬರೀಕರಣಗೊಂಡ ಹಳೆಯ ರಸ್ತೆಗಳು ಬರುತ್ತವೆ

5 ಈ ಆದ್ಯತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ, ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಸ್ಥಾಯಿ ಸಮಿತಿಯ (SLSC) ಅನುಮೋದನೆಯೊಂದಿಗೆ ಕೇಂದ್ರಕ್ಕೆ ಸಲ್ಲಿಸಲಾಗುತ್ತದೆ

ಕೇಂದ್ರವು ಯೋಜನೆಯ ಮಾರ್ಗಸೂಚಿಯನ್ವಯ ಅರ್ಹವಿರುವ ರಸ್ತೆಗಳಿಗೆ ಅಭಿವೃದ್ಧಿಗಾಗಿ ಅನುಮೋದನೆ ಒದಗಿಸುತ್ತದೆ

ಇ) ಈ ಯೋಜನೆಯಡಿ ಬರುವ ಕಾಮಗಾರಿಗಳ ಆಯ್ಕೆಯನ್ನು CUPL (ಆದ್ಯತಾಪಟ್ಟಿ)ನ ಅನುಸಾರವೇ ಮಂಜೂರಾತಿ ನೀಡಲಾಗುತ್ತದೆ ಈ ಪಟ್ಟಿಯನ್ನು ತಯಾರಿಸುವಾಗ ಸ್ಥಳೀಯ ಸಂಸದರ ಮತ್ತು ಶಾಸಕರ ಹಾಗೂ ಎಲ್ಲ ಜನಪ್ರತಿನಿಧಿಗಳ ಸಲಹೆ, ಸೂಚನೆ ಮತ್ತು ಮಾರ್ಗದರ್ಶನಗಳನ್ನು ಸ್ಥಳೀಯ ವಿಭಾಗಗಳು ಪಡೆಯಬೇಕಾಗಿರುತ್ತದೆ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕು ಪಂಚಾಯತ್‌ಗಳು ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲಾ ಪಂಚಾಯತ್‌ಗಳು ತಮ್ಮ ಸಾಮಾನ್ಯ ಸಭೆ (General Body Meeting) DRRP ಮತ್ತು CNW ಗಳನ್ನು ಹಾಗೂ CUPL ನ್ನು ಅನುಮೋದಿಸಿಕೊಳ್ಳಬೇಕಾಗಿರುತ್ತದೆ

948 ಶ್ರೀ ಪಾಟೀಲ್ ಎಂ ವೈ . ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಸರ್ಕಾರಿ ವತಿಯಿಂದ ನಡೆಯುತ್ತಿರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆಗಳೆಷ್ಟು,

ಆ) ಹಳೆಯ ಮೈಸೂರಿಗೆ ಹೋಲಿಸಿದಾಗ ಈ ಭಾಗದಲ್ಲಿ ಈ ಕಾಲೇಜುಗಳ ಕೊರತೆ ಇರುವುದು ಸರ್ಕಾರದ ಗಮನದಲ್ಲಿದೆಯಾ,

ಇ) ಇದ್ದಲ್ಲಿ ಅಫಜಲಪುರ ಮತಕ್ಷೇತ್ರವು ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿರುವುದರಿಂದ ಇಲ್ಲಿ ತಾಂತ್ರಿಕ ಶಿಕ್ಷಣದ ಅವಶ್ಯಕತೆಗನುಗುಣವಾಗಿ ಬರುವ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು).

ಅ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಸರ್ಕಾರಿ ವತಿಯಿಂದ ನಡೆಯುತ್ತಿರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ–07

ಆ) ಹೌದು

ಇ) ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಹೈದರಾಬಾದ್ ಕರ್ನಾಟಕವು ಸೇರಿದಂತೆ ಉತ್ತರ ಕರ್ನಾಟಕದಲ್ಲಿ 15 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಅದರಲ್ಲಿ 10 ಪಾಲಿಟೆಕ್ನಿಕ್‌ಗಳನ್ನು ಸದರಿ ಪ್ರಸಕ್ತ ಸಾಲಿನಲ್ಲಿ ಸ್ಥಾಪಿಸುವಂತೆ ಮನವಿಗಳು ಬಂದಿದ್ದು, ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಸರ್ಕಾರಿ ಪಾಲಿಟೆಕ್ನಿಗಳನ್ನು ಪ್ರಾರಂಭಿಸಲು ತಾಂತ್ರಿಕ ಮಾನವ ಸಂಪನ್ಮೂಲದ ಅಧ್ಯಯನದ ಅಗತ್ಯತೆ ಇದ್ದು ಈ ಕುರಿತು ತಾಂತ್ರಿಕ ಶಿಕ್ಷಣ ಇಲಾಖೆಯ ಹಂತದಲ್ಲಿ ಪರಿಶೀಲನೆ ನಡೆಯುತ್ತಿದೆ ಈ ಬಗ್ಗೆ ಒಂದು ಸಮಗ್ರ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಈಗಿರುವ ಎ ಐ ಸಿ ಟಿ ಇ ನಿಯಮಾನುಸಾರ ಪ್ರತಿ ಪಾಲಿಟೆಕ್ನಿಕ್‌ಗೆ 10 ಎಕರೆ ಒದಗಿಸಬೇಕಾಗುತ್ತದೆ ಅಲ್ಲದೆ ಮೂಲಭೂತ ಸೌಕರ್ಯಗಳಾದ ಕಟ್ಟಡ, ಯಂತ್ರೋಪಕರಣ ಪೀರೋಪಕರಣ ಮುಂತಾದವುಗಳನ್ನು ಒದಗಿಸಲು ಪ್ರತಿ ಪಾಲಿಟೆಕ್ನಿಕ್‌ಗೆ 3 ವರ್ಷಗಳ ಅವಧಿಯಲ್ಲಿ ಅಂದಾಜು 5 ಕೋಟಿ ರೂಗಳ ಆಯವ್ಯಯವನ್ನು ಒದಗಿಸಬೇಕಾಗುತ್ತದೆ ಆದ್ದರಿಂದ 2007-08ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಹೊಸ ಪಾಲಿಟೆಕ್ನಿಕ್ ಪ್ರಾರಂಭಿಸಲು ಅದರಲ್ಲಿಯೂ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಆದ್ಯತೆ ನೀಡಲು ಪರಿಶೀಲಿಸಲಾಗುವುದು

458 ಶ್ರೀ ನಾಗರಾಜು ಎಂ ಟಿ ಬಿ (ಹೊಸಕೋಟೆ) . ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಕೋಟೆ ಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ವ್ಯಾಸಂಗಕ್ಕೆ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ದಾಖಲಾಗಿರುವ ವಿದ್ಯಾರ್ಥಿಗಳ ಪೈಕಿ ಬಾಲಕರ ಮತ್ತು ಬಾಲಕಿಯರ ಸಂಖ್ಯೆ ಎಷ್ಟು ,

ಇ) ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ಪ್ರತ್ಯೇಕ ಪದವಿ ಪೂರ್ವ ಕಾಲೇಜಿಗಾಗಿ ಕೋರಿಕೆ ಬಂದಿದೆಯೇ,

ಈ) ಬಂದಿದ್ದಲ್ಲಿ ಕೋರಿಕೆಗೆ ಅನುಗುಣವಾಗಿ ಸರ್ಕಾರವು ಹಾಲಿ ಇರುವ ಪದವಿ ಪೂರ್ವ ಕಾಲೇಜನ್ನು ಬಾಲಕ ಮತ್ತು ಬಾಲಕಿಯರಿಗಾಗಿ ಬೇರ್ಪಡಿಸಲು ಉದ್ದೇಶಿಸಿದೆಯೇ